## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 01-10-2022 ರಂದು ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:118-ಲಾಲ್‌ಬಹದ್ದೂರ್ ನಗರ (ಹಳೇ ವಾರ್ಡ್ 50)ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ: 01-10-2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಂಖ್ಯೆ:118-ಲಾಲ್‌ಬಹದ್ದೂರ್ ನಗರ (ಹಳೇ ವಾರ್ಡ್ 50) ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ:118, ವಾರ್ಡ್ ಕಛೇರಿ, 2ನೇ ಮುಖ್ಯರಸ್ತೆ, ಕಸ್ತೂರಿನಗರ ಬೆಂಗಳೂರು-560043 ಇಲ್ಲಿ ಹಮ್ಮಿಕೊಳ್ಳಲಾಯಿತು. ಸದರಿ ಸಭೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತೆ ಇರುತ್ತದೆ.

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಆರ್.ಡಬ್ಲ್ಯೂ.ಎ**

1. ಶ್ರೀ.ಶಿವಕುಮಾರ್ ಶ್ರೀ.ವಿ.ಎಂ.ರಾಜಣ್ಣ ಸದಸ್ಯರು
2. ಶ್ರೀ.ನಾಗರಾಜ್ ಸದಸ್ಯರು
3. ಶ್ರೀ.ಚಂದ್ರು ಸದಸ್ಯರು
4. ಶ್ರೀ.ದಾಸಪ್ಪ ಶೆಟ್ಟಿ ಸದಸ್ಯರು
5. ಶ್ರೀ.ರಮಾನಥ್ ರಾವ್ ಆರ್.ಡಬ್ಲ್ಯೂ.ಎ
6. ಶ್ರೀ.ರಮೇಶ್ ಸದಸ್ಯರು

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಮಟ್ಟದ ಅಧಿಕಾರಿ/ನೌಕರರು**

1. ಶ್ರೀ.ಡಿ.ಮೂರ್ತಿ, ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ: 118 ಲಾಲ್‌ಬಹದ್ದೂರ್ ನಗರ (ಹಳೇ ವಾರ್ಡ್-50) ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ ಶ್ರೀ.ನರಸಿಂಹಯ್ಯ.ಎನ್, ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ವಾರ್ಡ್ ಸಂಖ್ಯೆ: 118
2. ಡಾ||ಅಶೋಕ್, ಪಿ.ಹೆಚ್.ಸಿ ಹಳೇ ಬೈಯ್ಯಪ್ಪನಹಳ್ಳಿ
3. ಶ್ರೀ.ಹರಿಕೃಷ್ಣ.ಎಸ್.ಕೆ.ವಾರ್ಡ್ ಮಾರ್ಷಲ್
4. ಶ್ರೀ.ಅಜಿತ್ ಹಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ.ರೇಣುಕ ಕಿರಿಯ ಆರೋಗ್ಯ ಪರಿವೀಕ್ಷಕರು
6. ಶ್ರೀ.ಮಂಜುನಾಥ್ ಟ್ರಾಫಿಕ್ ಇನ್ಸ್‌ಪೆಕ್ಟರ್

ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರಿಗೆ, ಸದಸ್ಯರಿಗೆ ಹಾಗೂ ವಿವಿಧ ಇಲಾಖೆಯ ಅಧಿಕಾರಿ/ನೌಕರರುಗಳಿಗೆ ಹಾಗೂ ಸಾರ್ವಜನಿಕರಿಗೆ ಸ್ವಾಗತ ಕೋರಿದರು. ಹಾಗೂ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ಹಾಗೂ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಮಂಡಿಸಲು ಮಾನ್ಯ ಅಧ್ಯಕ್ಷರು ತಿಳಿಸಿ, ಸಭೆಯನ್ನು ಪ್ರಾರಂಭಿಸಲಾಯಿತು.

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ.ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | **ಆರೋಗ್ಯ ಇಲಾಖೆ (Health Department)** | |
| | 2ನೇ ಮುಖ್ಯರಸ್ತೆ ಕಸ್ತೂರಿನಗರದಲ್ಲಿರುವ ಮೀನಿನ ಅಂಗಡಿಯನ್ನು ಮುಚ್ಚಲು ಕೋರಿರುತ್ತಾರೆ. ಇದಕ್ಕೆ ವಾರ್ಡ್ ಹಿರಿಯ ಆರೋಗ್ಯ ಪರಿವೀಕ್ಷಕರು ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. | ಹಿರಿಯ ಆರೋಗ್ಯ ಪರಿವೀಕ್ಷಕರು |
| | ಸರ್ವೀಸ್ ರಸ್ತೆ, ಫ್ಲೈ ಓವರ್ ಕೆಳಗಡೆ ವಾರ್ಡ್ ಸಂಖ್ಯೆ:51 ರವರು ಡಿ.ಡಬ್ಲ್ಯೂ.ಸಿ.ಸಿ ಯನ್ನು ನಿರ್ವಹಿಸುತ್ತಿದ್ದು, ಅವರನ್ನು ಕೂಡಲೇ ತೆರವುಗೊಳಿಸಲು ಕೋರಿದ್ದು, ಇದೇ ವಾರ್ಡಿನಲ್ಲಿ ಇರುವ ಡಿ.ಡಬ್ಲ್ಯೂ.ಸಿ.ಸಿ ಯನ್ನು ನಿರ್ವಹಿಸಲು ತಿಳಿಸಿರುತ್ತಾರೆ. ಇದಕ್ಕೆ ಶ್ರೀ.ರೇಣುಕಾ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. | ಕಿರಿಯ ಆರೋಗ್ಯ ಪರಿವೀಕ್ಷಕರು |
| | ಶ್ರೀ.ರಮಾನಾಥ್ ರೈ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆಯ ವಾಹನಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಇದಕ್ಕೆ ಶ್ರೀ.ರೇಣುಕಾ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಕ್ರಮ ಕೈಗೊಳ್ಳುವುದಾಗಿ | |

| | |
|---|---|
| **ಕಾಮಗಾರಿ ಇಲಾಖೆ (Engineering)** | |
| ಹಳೇ ಮದ್ರಾಸ್‌ಯಲ್ಲಿರುವ ಗೋಪಾಲನ್ ಮಾಲ್ ಎದುರುಗಡೆ ಪಾದಚಾರಿ ಮಾರ್ಗದಲ್ಲಿರುವ ಅಂಗಡಿಗಳನ್ನು ತೆರವುಗೊಳಿಸಲು ಶ್ರೀ.ರಮೇಶ್ ರವರು ತಿಳಿಸಿದರು. ಅದಕ್ಕೆ ಸಹಾಯಕ ಅಭಿಯಂತರರು ಮಾತನಾಡಿ ಪ್ರಸ್ತಾಪಿತ ಪ್ರದೇಶವು ರಸ್ತೆ ಮೂಲಭೂತ ಸೌಕರ್ಯ ವಿಭಾಗರವರಿಗೆ ಒಳಪಡುವುದರಿಂದ ಸದರಿಯವರಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು. | **Assistant Engineer-BBMP** |
| **ಬೆಂಗಳೂರು ಜಲ ಮಂಡಳಿ (BWSSB)** | |
| ಶ್ರೀ.ದಾಸಪ್ಪ ಶೆಟ್ಟಿ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ಮ್ಯಾನ್‌ಹೋಲ್‌ಗಳನ್ನು ದುರಸ್ಥಿಪಡಿಸಲು ಕೋರಿದರು. | **Assistant Engineer-BWSSB** |
| **ಅರಣ್ಯ ಇಲಾಖೆ** | |
| ಶ್ರೀ.ದಾಸಪ್ಪ ಶೆಟ್ಟಿ ಸದಸ್ಯರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಒಣಗಿ ಹೋಗಿರುವ ಮರಗಳು, ರೆಂಬೆ-ಕೊಂಬೆಗಳನ್ನು ಹಾಗೂ ಬೀಳುವ ಹಂತದಲ್ಲಿರುವ ಮರಗಳನ್ನು ತೆರವುಗೊಳಿಸಲು ಕೋರಿದರು. | ವಲಯ ಅರಣ್ಯ ಅಧಿಕಾರಿಗಳು |
| **ಸಂಚಾರ ಪೊಲೀಸ್ ಇಲಾಖೆ TRAFIC POLICE DEPARTMENT** | |
| ಶ್ರೀ.ದಾಸಪ್ಪ ಶೆಟ್ಟಿ ಸದಸ್ಯರು ಮಾತನಾಡಿ ಸಿ.ಎಂ.ಆರ್ ಕಾಲೇಜು ಹತ್ತಿರ ಅನಧಿಕೃತವಾಗಿ ವಾಹನಗಳನ್ನು ನಿಲ್ಲಿಸುತ್ತಿರುವುದನ್ನು ತಡೆಗಟ್ಟಲು ಹಾಗೂ ಸಂಚಾರ ದಟ್ಟಣೆಯನ್ನು ತಡೆಗಟ್ಟಲು ಕೋರಿದರು. ಅದಕ್ಕೆ ಶ್ರೀ.ನಾಗರಾಜ್ ಟ್ರಾಫಿಕ್ ಇನ್ಸ್‌ಪೆಕ್ಟರ್ ಜೀವನ್‌ಭೀಮಾನಗರ ರವರು ಮಾತನಾಡಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು. | **Trafic Police Departmrnt** |
| **ಪೊಲೀಸ್ ಇಲಾಖೆ (ಕಾ ಮತ್ತು ಸು)** | |
| ವಾರ್ಡ್ ವ್ಯಾಪ್ತಿಯಲ್ಲಿ ಕಾಲೇಜುಗಳ ಸುತ್ತ-ಮುತ್ತ ಗಸ್ತು ನಡೆಸಲು ಕ್ರಮ ವಹಿಸಲು ಕೋರಿರುತ್ತಾರೆ. | **Police Departmrnt** |

ಪ್ರಸ್ತುತ ಸಭೆಗೆ ಗೈರು ಹಾಜರಾಗಿರುವವರ ವಿರುದ್ಧ ನೋಟೀಸು ಜಾರಿ ಮಾಡಿ, ಮುಂದಿನ ಸಭೆಗೆ ಕಡ್ಡಾಯವಾಗಿ ನಿಗಧಿತ ಸಮಯದೊಳಗೆ ಹಾಜರಿರಲು ಹಾಗೂ ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ವಾರ್ಡ್ ಸಮಿತಿ ಕಾರ್ಯದರ್ಶಿರವರಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ತಿಳಿಸಿ ಕಾರ್ಯದರ್ಶಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ಕಾರ್ಯದರ್ಶಿಗಳು**

ಶ್ರೀ.ನರಸಿಂಹಯ್ಯ.ಎನ್
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ:118(50)

ಅಧ್ಯಕ್ಷರು

ಶ್ರೀ.ಡಿ.ಮೂರ್ತಿ
ಮತ್ತು ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:118 (50)

ಪ್ರತಿಯನ್ನು:-

1. ಶ್ರೀ.ಡಿ.ಮೂರ್ತಿ, ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ: 118 ಲಾಲ್‌ಬಹದ್ದೂರ್ ನಗರ (ಹಳೇ ವಾರ್ಡ್-50) ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
2. ಕಾರ್ಯಪಾಲಕ ಅಭಿಯಂತರರು, ಸಿ.ವಿ.ರಾಮನ್‌ನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
3. ಮಾನ್ಯ ತಹಶೀಲ್ದಾರ್, ಕೆ.ಆರ್.ಪುರಂ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸುತ್ತಾ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.

4. ಅಧೀಕ್ಷಕರು, ತೋಟಗಾರಿಕೆ ಇಲಾಖೆ(ಪೂರ್ವ) ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
5. ಆರೋಗ್ಯ ವೈದ್ಯಾಧಿಕಾರಿಗಳು(ಸಿ.ವಿ.ರಾಮನ್‌ನಗರ) ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
6. ಆರಕ್ಷಕ ನಿರೀಕ್ಷಕರು, ಕಾನೂನು ಸುವ್ಯವಸ್ಥೆ, ಬೈಯ್ಯಪ್ಪನಹಳ್ಳಿ/ರಾಮೂರ್ತಿನಗರ/ಜೀವನ್‌ಭೀಮಾನಗರ/ ಇಂದಿರಾನಗರ, ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
7. ಆರಕ್ಷಕ ನಿರೀಕ್ಷಕರು(ಸಂಚಾರ ಪೋಲೀಸ್ ಠಾಣೆ) ಬಾಣಸವಾಡಿ/ರಾಮೂರ್ತಿನಗರ/ಜೀವನ್‌ಭೀಮಾನಗರ/ ಇಂದಿರಾನಗರ, ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಿ.ವಿ.ರಾಮನ್‌ನಗರ ಉಪ ವಿಭಾಗ/ಕಾಮಗಾರಿ ಇಲಾಖೆ/ಘನತ್ಯಾಜ್ಯ ನಿರ್ವಹಣೆ/ವಿದ್ಯುತ್/ಬಿಡಬ್ಲ್ಯೂಎಸ್‌ಎಸ್‌ಬಿ/ಬೆಸ್ಕಾಂ/ಬೃಹತ್ ನೀರುಗಾಲುವೆ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
9. ಸಹಾಯಕ ಕಂದಾಯ ಅಧಿಕಾರಿ, ಸಿ.ವಿ.ರಾಮನ್‌ನಗರ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
10. ಅರಣ್ಯಾಧಿಕಾರಿಗಳು, ಬಿ.ಬಿ.ಎಂ.ಪಿ ಅರಣ್ಯ ಇಲಾಖೆ, ಸಿ.ವಿ.ರಾಮನ್‌ನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
11. ಕಂದಾಯ ಪರಿವೀಕ್ಷಕರು ಮತ್ತು ಕಂದಾಯ ವಸೂಲಿಗಾರರು, ವಾರ್ಡ್ ಸಂಖ್ಯೆ:118-ಲಾಲ್ ಬಹದ್ದೂರ್‌ನಗರ ರವರ ಮಾಹಿತಿಗಾಗಿ ಹಾಗೂ ಸಭೆಗೆ ಹಾಜರಾಗಲು ಕೋರಿದೆ
12. ವೈದ್ಯಾಧಿಕಾರಿಗಳು, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಹಳೇ ಬೈಯ್ಯಪ್ಪನಹಳ್ಳಿ ವಾರ್ಡ್ ಸಂಖ್ಯೆ:118-ಲಾಲ್ ಬಹದ್ದೂರ್‌ನಗರ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
13. ಹಿರಿಯ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ:118-ಲಾಲ್ ಬಹದ್ದೂರ್‌ನಗರ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
14. ಸ್ಥಳೀಯ ವಸತಿ ಕ್ಷೇಮಾಭಿವೃದ್ಧಿ ಸಂಘ(RWA) ರವರು ವಾರ್ಡ್ ಸಂಖ್ಯೆ:118-ಲಾಲ್ ಬಹದ್ದೂರ್‌ನಗರ ರವರ ಮಾಹಿತಿಗಾಗಿ ಹಾಗೂ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
15. ಕಛೇರಿ ಕಡತಕ್ಕೆ